

ಬ್ರಾಹ್ಮಣನ ರೂಪದಲ್ಲಿ ಬಂದ ಇಂದ್ರನಿಗೆ ಕವಚ ಕುಂಡಲಗಳನ್ನು ದಾನ ಮಾಡುತ್ತಿರುವ ಕರ್ಣ



ಈಶ್ವರನಿಂದ ಅರ್ಜುನನಿಗೆ ಪಾಶುಪತಾಸ್ತ್ರದ ಕೃಪೆ

# ಮಹಾಭಾರತ ಕಥನ ತೈಲವರ್ಣದ ಆವರಣ

ಮಹಾಭಾರತದ ರೋಚಕ ಕಥೆಯನ್ನು ಕಲಾವಿದ ಸಿ.ಜೆ. ಸ್ವಾಮಿ ಅವರು ತೈಲವರ್ಣ ಚಿತ್ರಗಳಲ್ಲಿ ಅನಾವರಣಗೊಳಿಸಿದ್ದಾರೆ. ಒಟ್ಟು 178 ಕಲಾಕೃತಿಗಳು ಮಹಾಕಾವ್ಯವನ್ನು ಪಕ್ಷಿನೋಟ ಕ್ರಮದಲ್ಲಿ ಕಟ್ಟಿಕೊಟ್ಟಿವೆ.

■ ಉಮಾ ಅನಂತ್



ಸಿ.ಜೆ. ಸ್ವಾಮಿ

ಭಾರತದ ಕಲಾವಿದರ ಪಾಲಿಗೆ ಮಹಾಭಾರತ ಅಕ್ಷಯಪಾತ್ರೆಯಿದ್ದಂತೆ. ಕಾವ್ಯ, ಸಂಗೀತ, ನೃತ್ಯ, ಚಿತ್ರಕಲೆ– ಪ್ರತಿಯೊಂದು ಕಲಾಪ್ರಕಾರಕ್ಕೂ ಭಾರತ ಕಥನ ಎಲ್ಲ ಕಾಲಕ್ಕೂ ಒದಗಿಬರುವಂತಹದ್ದು. ಹವ್ಯಾಸಿ ಚಿತ್ರಕಲಾವಿದ ಸಿ.ಜೆ. ಸ್ವಾಮಿ ಅವರಿಗೂ ಮಹಾಭಾರತ ಅವರ ಕಲಾಪ್ರೀತಿಯ ಅಭಿವ್ಯಕ್ತಿಗೆ ದ್ರವ್ಯವಾಗಿ ಒದಗಿಬಂದಿದೆ.

ಚಕ್ರವ್ಯೂಹದಲ್ಲಿ ಅಭಿಮನ್ಯುವಿನ ಶೌರ್ಯ, ಕೌರವರು ಪಾಂಡವರ ಪಗಡೆ ಆಟ, ಬ್ರಾಹ್ಮಣನ ರೂಪದಲ್ಲಿ ಬಂದ ಇಂದ್ರನಿಗೆ ಕವಚ ಕುಂಡಲಗಳನ್ನು ದಾನ ಮಾಡುವ ಕರ್ಣ, ಈಶ್ವರನಿಂದ ಪಾಶುಪತಾಸ್ತ್ರವನ್ನು ಪಡೆದ ಅರ್ಜುನ, ಕುರುಕ್ಷೇತ್ರ ಯುದ್ಧದಲ್ಲಿ ಒಮ್ಮೆಗೇ ಎಂಟು ಕೌರವ ಸಹೋದರರನ್ನು ವಧೆ ಮಾಡುದ ಭೀಮ, ಅರ್ಜುನನಿಗೆ ಶ್ರೀಕೃಷ್ಣನ ವಿಶ್ವರೂಪ ದರ್ಶನ, ಗೀತೋಪದೇಶ– ಹೀಗೆ, ಮಹಾಭಾರತದ ಪ್ರಮುಖ ಘಟ್ಟಗಳು ಸ್ವಾಮಿ ಅವರ ಕುಂಚದಲ್ಲಿ ಪ್ರಕಟಗೊಂಡಿವೆ.

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಅರಳಿಕಟ್ಟೆ ಸ್ವಾಮಿ ಅವರ ಊರು. ಕಾರ್ಪೊರೇಟ್ ಜಗತ್ತಿನಲ್ಲಿ



ಮುದಿಕಪಿಯೆಂದು ಮೂದಲಿಸಿದ ಭೀಮಸೇನನಿಗೆ ಹನುಮಂತನು ಕಲಿಸಿದ ಪಾಠ